# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1135
2. ಸದಸ್ಯರ ಹೆಸರು : ಶ್ರೀ ಸಿ.ಎಸ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 25.07.2024.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸ್ತ್ರೀ ಶಕ್ತಿ ಉಚಿತ ಬಸ್ ಸೇವೆ ಉಚಿತ ವಿದ್ಯುತ್ ಇತರೆ ಯಾವ ಯಾವ ಉಚಿತ ಯೋಜನೆಗಳಿಗಾಗಿ ಕಳೆದ ಒಂದು ವರ್ಷದಿಂದ ಸರ್ಕಾರ ಯಾವ ಯಾವ ಬಾಬ್ತುಗಳಿಂದ ಎಷ್ಟೆಷ್ಟು ಕೋಟಿ ಹಣವನ್ನು ಯಾವ ಯಾವ ಇಲಖಾ ಅನುದಾನದಿಂದ ಪಡೆದು ಬಿಡುಗಡೆ ಮಾಡಿದೆ;(ಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗಾಗಿ ಬೇಕಾಗಿರುವ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದ್ದು, ಈ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆ ಹಾಗೂ ಈ ಯೋಜನೆಗಳಿಗೆ ಈವರೆಗೂ ಮಾಡಿರುವ ವೆಚ್ಚದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ಬೇರೆ ಇಲಾಖೆ ಅನುದಾನವನ್ನು ಉಚಿತ ಭಾಗ್ಯಕ್ಕೆ ನೀಡಿ ಸಮಾಜದ ಶೋಷಿತ ವರ್ಗಕ್ಕೆ ಅನ್ಯಾಯ ಹಾಗೂ ವಂಚನೆ ಮಾಡಿರುವುದು ಸರಿಯೇ: | ಗ್ಯಾರಂಟಿ ಯೋಜನೆಗಳಿಗಾಗಿ ಬೇಕಾಗಿರುವ ಅನುದಾನವನ್ನು ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದೆ. ಇತರೆ ಇಲಾಖೆಗಳ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡುತ್ತಿಲ್ಲ. |
| ಇ | 60 ವರ್ಷ ಮೇಲ್ಪಟ್ಟ ಎಲ್ಲಾ ಹಿರಿಯ ನಾಗರೀಕರಿಗೆ ಕೆ.ಎಸ್.ಆರ್.ಟಿ.ಸಿ. ಹಾಗೂ ಬಿ.ಎಂ.ಟಿ.ಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ನೀಡಲು ಸರ್ಕಾರ ಕೈಗೊಂಡ ಕ್ರಮವೇನು? | ರಾಜ್ಯದ ರಸ್ತೆ ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 60 ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ಕರ್ನಾಟಕ ರಾಜ್ಯದ ಹಿರಿಯ ನಾಗರೀಕರಿಗೆ, ನಗರ/ ನಗರ ಹೊರವಲಯ ಮತ್ತು ಅಂತರ ರಾಜ್ಯ ಮಾರ್ಗಗಳಲ್ಲಿ ಕಾರ್ಯಾಚರಿಸುತ್ತಿರುವ ಸಾಮಾನ್ಯ ವೇಗದೂತ ಮತ್ತು ರಾಜಹಂಸ ಬಸ್‌ಗಳಲ್ಲಿ ಪ್ರಯಾಣಿಸಲು ಪ್ರಯಾಣಿಕರ ಟಿಕೆಟ್ ದರಗಳಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.<br><br>ಪ್ರಸ್ತುತ ಸದರಿಯವರಿಗೆ ಉಚಿತ ಪ್ರಯಾಣ ಸೌಲಭ್ಯ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ |

FD 100 2024-DS-BR

(ಸಿದ್ಧರಾಮಯ್ಯ)
ಮುಖ್ಯಮಂತ್ರಿ

## ಅನುಬಂಧ

| ಕ್ರ.ಸಂ | ಗ್ಯಾರಂಟಿ ಯೋಜನೆ | ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು | 2023-24 ರಲ್ಲಿ ಖರ್ಚಾದ ಅನುದಾನ (ಕೋಟಿ ರೂ.ಗಳು) | 2024 ಜುಲೈ-14 ರವರೆಗು ಖರ್ಚಾದ ಅನುದಾನ (ಕೋಟಿ ರೂ.ಗಳು) |
|---|---|---|---|---|
| 1 | ಗೃಹ ಲಕ್ಷ್ಮಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 16,964 | 6,133 |
| 2 | ಗೃಹ ಜ್ಯೋತಿ | ಇಂಧನ ಇಲಾಖೆ | 8,900 | 3,000 |
| 3 | ಅನ್ನ ಭಾಗ್ಯ | ಆಹಾರ ಮತ್ತು ನಾಗರೀಕ ಸರಬರಾಜು. | 5,706 | 1,327 |
| 4 | ಯುವ ನಿಧಿ | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 89 | 38 |
| 5 | ಶಕ್ತಿ | ಸಾರಿಗೆ ಇಲಾಖೆ | 3,200 | 1,254 |
| ಒಟ್ಟು | | | **34,859** | **11,752** |



Generated from eOffice by RAJAMMA M. FD-US-CT2&COORD(RM). US-CT2&COORD, FINANCE DEPT.SEC on 25/07/2024 03:30 PM